ಟೆಂಡರನ್ನು ಮರು ಟೆಂಡರ್ ಮಾಡಬೇಕೆಂದು ಪತ್ರವನ್ನು ಬರೆದಿದ್ದಾರೆ. ನಾನೂ ಸಹ ಪತ್ರ ಬರೆದಿದ್ದೇನೆ. ಆದರೆ ಇವರೆಲ್ಲರ ಜೊತೆಗೆ ಜಿಲ್ಲಾ ಉಸ್ತುವಾರಿ ಸಚಿವರು ಪತ್ರ ಬರೆದ ನಂತರವೂ ನಿರ್ದೇಶಕರು ಈ ಟೆಂಡರನ್ನು ಪಾಸ್ ಮಾಡಿ ಅದೇ ವ್ಯಕ್ತಿಗೆ ಕೊಟ್ಟಿದ್ದಾರೆ. ಆದ್ದರಿಂದ ನನ್ನ ವಿನಂತಿ ಏನೆಂದರೆ 20–25 ವರ್ಷಗಳಿಂದ ಒಬ್ಬರೇ ಇಲ್ಲಿ ಆಸ್ಪತ್ರೆಗೆ ಟೆಂಡರ್ ಹಾಕಿ ಸಸ್ಯಾಹಾರ ಪೂರೈಕೆ ಮಾಡಿ ರೋಗಿಗಳಿಗೆ ಸರಿಯಾದಂಥ ಆಹಾರವನ್ನು ಕೊಡುತ್ತಿಲ್ಲ. ನಮ್ಮ ಉಡುಪಿ ಜಿಲ್ಲಾಸ್ಪತ್ರೆ ಈ ಟೆಂಡರನ್ನು ಮರು ಟೆಂಡರ್ ಮಾಡಿ ಪಾರದರ್ಶಕವಾಗಿ ಎಲ್ಲರೂ ಭಾಗವಹಿಸುವಂತೆ ಒಳ್ಳೆಯ ಟೆಂಡರು ಮಾಡಲಿಕ್ಕೆ ಮಾನ್ಯ ಸಚಿವರು ಅವಕಾಶ ಮಾಡಿಕೊಡಬೇಕು. ಮತ್ತೆ ರಾಜ್ಯದಲ್ಲಿ ಎಲ್ಲಾ ಕಡೆ ಈ ಸಸ್ಯಾಹಾರಕ್ಕೆ ಸರ್ಕಾರ ಇಷ್ಟು ಖರ್ಚು ಮಾಡುವಂಥದ್ದು ರೋಗಿಗಳಿಗೆ ಮುಟ್ಟುತ್ತಿಲ್ಲ. ಅದು ರೋಗಿಗಳಿಗೆ ಮುಟ್ಟುವಂಥ ನಿಟ್ಟಿನಲ್ಲಿ ಪ್ರಯತ್ನ ಮಾಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎನ್. ಚಲುವರಾಯಸ್ವಾಮಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಮಾನ್ಯ ಅಧ್ಯಕ್ಷರೆ, ಎಲ್ಲ ಜಿಲ್ಲಾಸ್ಪತ್ರೆಗಳಲ್ಲಿ ಈ ಒಂದು ವ್ಯವಸ್ಥೆ ಇದೆ. ಈಗಾಗಲೇ ಬಹುಶಃ visit ಮಾಡಿ inspection ಮಾಡಿದಾಗ ಸಾಕಷ್ಟು ಕಡೆ ಪತ್ರಿಕೆಯಲ್ಲಿ ಸಹ ಹೇಳಿದ್ದೇನೆ ಮತ್ತು ನಮ್ಮ ಎಲ್ಲಾ ಶಾಸಕ ಸ್ನೇಹಿತರಿಗೂ ಸಹ 'ನೀವು ಆಗಿಂದಾಗ್ಗೆ ಹೋದಾಗ ಅದರ ಬಗ್ಗೆ ಸ್ವಲ್ಪ ತನಿಖೆ ಮಾಡತಕ್ಕಂಥದ್ದನ್ನು ಮಾಡಬೇಕೆಂತಲೂ' ವಿನಂತಿ ಮಾಡಿಕೊಂಡಿದ್ದೇನೆ. ಉಡುಪಿ ಜಿಲ್ಲಾಸ್ಪತ್ರೆ ಬಗ್ಗೆ ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆ, ಅದರ ಬಗ್ಗೆ ನಾನು ವರದಿ ತರಿಸಿಕೊಂಡು, ರದ್ದು ಮಾಡಿ, ಮುಂದಿನ ಟೆಂಡರ್ ಅನ್ನು ಮಾಡಲಿಕ್ಕೆ ಆದೇಶವನ್ನು ಮಾಡುತ್ತೇನೆ. ಅದರ ಬಗ್ಗೆ ನಾಳೆಯೇ ರಿಪೋರ್ಟ್ ತರಿಸಿಕೊಂಡು ಮತ್ತು ಎಲ್ಲಾ District Surgeonಗಳಿಗೂ ಸಹ noticeಅನ್ನು ಕೊಟ್ಟು ಇದನ್ನು ಸರಿಯಾದ ರೀತಿ ಪಾರದರ್ಶಕವಾಗಿ ಮಾಡಿ ರೋಗಿಗಳಿಗೆ supply ಮಾಡಬೇಕೆನ್ನುವುದರ ಬಗ್ಗೆ ಸ್ಪಷ್ಟ ನಿರ್ದೇಶನವನ್ನು ಕೊಡುತ್ತೇನೆ.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ): ಮಾನ್ಯ ಅಧ್ಯಕ್ಷರೆ, ರಾಜ್ಯದ ಎಲ್ಲಾ ಕಡೆ ಸಹಕಾರಿ ಸಂಘಗಳ ಚುನಾವಣೆಯಾಗುತ್ತಿದೆ. ನಮ್ಮ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಕೆಲವು ಘಟನೆಗಳನ್ನು ಯಾವ ರೀತಿಯಲ್ಲಿ ಚುನಾವಣೆಯಾಗುತ್ತಿದೆ ಎಂದು ಸರ್ಕಾರದ ಗಮನಕ್ಕೆ ತರಲು ಇಚ್ಛೆಪಡುತ್ತಿದ್ದೇನೆ. ಒಂದು ಸಹಕಾರಿ ಸಂಸ್ಥೆಯಲ್ಲಿ ಆಭ್ಯರ್ಥಿಗಳು ನಮ್ಮದೇ ಸಹಿ ಎಂದು ಹೇಳಿದರೂ

ಚುನಾವಣಾಧಿಕಾರಿ ಹೇಳುತ್ತಾನೆ, ನಿಮ್ಮದಲ್ಲ ಸಹಿ ಎಂದು,signature defaulter ಎಂದು ರಿಜೆಕ್ಟ್, ಅಭ್ಯರ್ಥಿಗಳು ನಿಂತ ಹಾಗೆ, signature default ಎಂದು ಚುನಾವಣೆ ರಿಜೆಕ್ಟ್ ಮಾಡುತ್ತಾನೆ. ಅಲ್ಲಿ ಅಭ್ಯರ್ಥಿ ನನಗೊಂದು ಪತ್ರವನ್ನು ಬರೆದಿದ್ದಾರೆ. ನನ್ನ ಸಹಿಯನ್ನು ಬೇರೆಯವರು ಹಾಕಿ ನನ್ನ ನಾಮಪತ್ರವನ್ನು ವಾಪಸ್ ಪಡೆದಿದ್ದಾರೆ. ನಾನು ನಿಮ್ಮ ಹೇಳಿಕೆಯ ಪ್ರಕಾರ ಡಿ.ಆರ್. ಹತ್ತಿರ ಕಂಪ್ಲೇಂಟ್ ಕೊಡಲು ಅದರ ಒಂದು ಕಾಪಿಯನ್ನು ಪಡೆದುಕೊಂಡು ಬಾ ಎಂದರೆ ಇವರು ಅವರಿಗೆ ಫೋರ್ಸ್ ಮಾಡಿ signature ಅನ್ನು ತೆಗೆದುಕೊಳ್ಳುತ್ತಾರೆ. ಪುನಃ ನನಗೆ ಪತ್ರ ಬರೆದು ಹೀಗೆ ಹೀಗೆ ನನಗೆ ಮಾಡಿದ್ದಾರೆ ಎಂದು ಹೇಳಿದ್ದಾರೆ. ಇದರ ಬಗ್ಗೆ ತನಿಖೆಯಾಗಲಿ. ಈ ಸಹಕಾರಿ ಚುನಾವಣೆ ಇನ್ನೊಂದು ಕಡೆ, ಅದು ಉಪ್ಪೂರು ಸೊಸೈಟಿಯಲ್ಲಾದರೆ, ಕೋಟಾ ಸೊಸೈಟಿಯಲ್ಲಿ ಯಾರು ಡಿಫಾಲ್ಟರ್ ಎಂದು ಡಿಸ್-ಕ್ವಾಲಿಫೈ ಮಾಡಿದ್ದರು. ಚುನಾವಣೆಗೆ ನಾಮಪತ್ರ ಹಾಕಲು ಎರಡು ದಿವಸ ಮೊದಲು ಇಂಟರೆಸ್ಟ್ ಅನ್ನು ಕಟ್ಟಿಸಿಕೊಂಡು ಅದೇ ದಿವಸ ರಿನ್ಯು ಮಾಡುತ್ತಾರೆ. ಡಿ.ಆರ್. ಹತ್ತಿರ ಸ್ಟೇ ತೆಗೆದುಕೊಳ್ಳುತ್ತಾರೆ. ಪುನಃ ಅವರಿಗೆ ಚುನಾವಣೆಗೆ ಅವಕಾಶ ಕೊಡುತ್ತಾರೆ. ಇನ್ನೊಬ್ಬರು ವಾಸ್ತವ್ಯ ಇಲ್ಲದಿದ್ದರೂ ಅವರ ನಾಮಪತ್ರವನ್ನು accept ಮಾಡುತ್ತಾರೆ. ಬೇರೆಯವರದನ್ನು ಅವರ ಎದುರಿಗೆ ಇದ್ದವರದ್ದನ್ನು ರಿಜೆಕ್ಟ್ ಮಾಡುತ್ತಾರೆ. ಇದು ಕೇವಲ ಎರಡು ಸೊಸೈಟಿಯದನ್ನು ಉದಾಹರಣೆ ಕೊಟ್ಟಿರುವೆ. ಇನ್ನೊಂದು ಕಲ್ಲಬೆಟ್ಟು ಸೊಸೈಟಿಯದ್ದು, ಏಳು ಜನರಿದ್ದಾರೆ, ಏನು ಅವಿರೋಧವಾಗಿ ಆಯ್ಕೆಯಾಗಿದ್ದಾರೆ, ಒಬ್ಬ ಅಭ್ಯರ್ಥಿ ಇಲ್ಲೂ ಕೂಡ, ಅ ರಿಟರ್ನಿಂಗ್ ಆಫೀಸರ್ ಏನು ಹೇಳುತ್ತಾನೆಂದರೆ, ನಿಮ್ಮ ಓಟರ್ ಲಿಸ್ಟ್ ಸರಿಯಿಲ್ಲವೆಂದು ಇಡೀ ಎಲೆಕ್ಷನ್‌ಗೆ ಸ್ಟೇ ಮಾಡುತ್ತಾನೆ. ಎಲೆಕ್ಷನ್ ಪ್ರೋಸೆಸ್ ಸ್ಟಾರ್ಟ್ ಆದ ಮೇಲೆ, ಇಡೀ ಚುನಾವಣೆಯನ್ನು ಸ್ಟೇ ಮಾಡಿ ಅಡ್ಮಿನಿಸ್ಟ್ರೇಟರ್ ಅನ್ನು ಅಪಾಯಿಂಟ್‌ಮೆಂಟ್ ಮಾಡಲು... ಇದು ಕೆಲವು ಸಮಯದಿಂದ ಅನೇಕ ಸಂಘಗಳಲ್ಲಿ ಈ ರೀತಿಯಾಗಿ ನಾಮಪತ್ರವನ್ನು ರಿಜೆಕ್ಟ್ ಮಾಡಿದ ಕೇಸುಗಳನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಸಂಬಂಧಪಟ್ಟ ಅಧಿಕಾರಿಯ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮೂಲಕ ಸರ್ಕಾರದ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು): ಈ ತರಹದ ಆಪಾದನೆಗಳು ಬೇರೆ ಬೇರೆ ಕಡೆ ಬಂದಿರತಕ್ಕದ್ದೂ ಇದೆ. ಬಳ್ಳಾರಿ ಜಿಲ್ಲೆಯ ಹರಪ್ಪನಳ್ಳಿಯಲ್ಲಿ

ಕೂಡ ಈ ರೀತಿಯದ್ದಾಗಿದೆ. ನಾನು ಕೂಡ ನೋಡಿದ್ದೇನೆ. ಆದರೆ, ಒಂದು ನಮಗೆ ಇರತಕ್ಕ ಕಾಯ್ದೆಯಲ್ಲಿ ಮಾನ್ಯ ಜಯಪ್ರಕಾಶ್ ಹೆಗ್ಡೆಯವರಿಗೂ ಗೊತ್ತಿದೆ, ಸೆಕ್ಷನ್ 17ರ ಕೆಳಗೆ ನಾವು ಡಿಸ್‌ಪ್ಯೂಟ್ ಅನ್ನು ರೈಸ್ ಮಾಡಬೇಕಾಗುತ್ತದೆ. ಅದೊಂದು ಬಿಟ್ಟರೆ ಬೇರೆ ದಾರಿ ಇಲ್ಲ. ಏಕೆಂದರೆ, ನಾವು ಹೈಕೋರ್ಟ್‌ಗೇ ಬಂದರೂ ಕೂಡ ನೀವು ನಿಮ್ಮ ಕಾನೂನಿನಲ್ಲಿರತಕ್ಕಂಥ ಅನುಕೂಲಗಳೇನಿವೆ ಅದನ್ನು ಮಾಡದೆ ಬರಲು ಸಾಧ್ಯವಿಲ್ಲವೆಂದು ಅಲ್ಲಿಯೂ ಹೇಳುತ್ತಾರೆ. ಆದರೆ, ಇಲ್ಲಿ ಅಸಿಸ್ಟೆಂಟ್ ರಿಟರ್ನಿಂಗ್ ಆಫೀಸರ್ ಮಾಡಿರತಕ್ಕ ತಪ್ಪುಗಳ ಮೂಲಕ ಪ್ರಯತ್ನಗಳು ಆಗಿದ್ದಾವೆ. ಈ ವಿಚಾರದಲ್ಲಿ ತಮ್ಮ ಮಾಹಿತಿಯನ್ನು ಸಮಗ್ರವಾಗಿ ಕಳಿಸಿಕೊಟ್ಟರೆ ಮಾನ್ಯ ಸಹಕಾರ ಮಂತ್ರಿಗಳ ಜೊತೆಗೆ ಈ ವಿಚಾರವನ್ನು ಪ್ರಸ್ತಾಪ ಮಾಡಿ ನಾಳೆ ತಮಗೆ ಉತ್ತರವನ್ನು ಒದಗಿಸುತ್ತೇನೆ.

ಶ್ರೀ. ಕೆ. ಜಯಪ್ರಕಾಶ್ ಹೆಗ್ಡೆ: ಮುಂದಿನ ಚುನಾವಣೆಯಲ್ಲಿ ಈ ರೀತಿ ಆಗಬಾರದು ಎಂದಷ್ಟೇ.

ಶ್ರೀ ಎಂ.ಪಿ. ಪ್ರಕಾಶ್ : ಖಂಡಿತ

ಶ್ರೀ ಮಹಿಮಾ ಪಟೇಲ್: (ಚನ್ನಗಿರಿ): ಮಾನ್ಯ ಅಧ್ಯಕ್ಷರೆ, ಪ್ರಪಂಚದಲ್ಲಿ ಅಪಘಾತಗಳಲ್ಲಿ ಸಾಯುವಂಥವರನ್ನು ಲೆಕ್ಕ ಹಾಕಿದರೆ ರಸ್ತೆ ಮೂಲಕ ಪ್ರಯಾಣ ಮಾಡುವ ಪ್ರಯಾಣಿಕರು ಅವರ ಶೇಕಡಾವಾರು ಸಾವು ಅದು ಅತ್ಯಧಿಕ. ಅದಾದಮೇಲೆ, ರೈಲ್ವೆ ಅದು ಅದಕ್ಕಿನ್ನ ಸ್ವಲ್ಪ ಕಡಿಮೆ. ರಸ್ತೆಯಲ್ಲಿ ಪ್ರಯಾಣ ಮಾಡಿ ಅಪಘಾತದಲ್ಲಿ ಸಾಯುವವರಿಗಿಂತ ರೈಲ್ವೆಯಲ್ಲಿ ಪ್ರಯಾಣ ಮಾಡಿ ಸಾಯುವವರ ಸಂಖ್ಯೆ ಕಡಿಮೆ. ಅದಕ್ಕಿನ್ನ ಕಡಿಮೆ ಎಂದರೆ ವಿಮಾನಯಾನ. ವಿಮಾನಯಾನದಲ್ಲಿ ಎಷ್ಟು ಜನ ಪ್ರಯಾಣ ಮಾಡುತ್ತಾರೆ, ಅದರಲ್ಲಿ ಅಪಘಾತದಿಂದ ಸಾವು ಉಂಟಾಗುವುದು ಅತ್ಯಲ್ಪ ಎಂದು ಹೇಳಿ ಒಂದು ಸರ್ವೆ ಹೇಳುತ್ತದೆ. ನಮ್ಮ ರಾಜ್ಯದಲ್ಲಿ ಸಾಕಷ್ಟು airport ಗಳನ್ನು develop ಮಾಡುವಂಥ ಸಾಧ್ಯತೆ ಇದೆ. ಆ ದಿಕ್ಕಿನಲ್ಲಿ ಬೆಂಗಳೂರು ಅಲ್ಲದೆ, ಹಾಸನ , ಮೈಸೂರು, ಹುಬ್ಬಳ್ಳಿ, ಗುಲಬರ್ಗಾ, ಬಳ್ಳಾರಿ, ಹರಿಹರ, ಜಕ್ಕೂರು ಇವೆಲ್ಲ airport ಗಳನ್ನು ನಾವು ಉತ್ತಮಪಡಿಸುವುದಕ್ಕೆ ಸಾಧ್ಯತೆ ಇದೆ. ಆ ಬಗ್ಗೆ ಈ ಬಡ್ಜೆಟ್ ನಲ್ಲಿ ಸ್ವಲ್ಪ ಹಣವನ್ನು ಕೂಡ ಇಟ್ಟಿದೆ. ಆದರೆ, ನಾವು airport ಗಳನ್ನು ಉನ್ನತ ದರ್ಜೆಗೇರಿಸಬೇಕೆಂದು ಬಂದ ತಕ್ಷಣ ಏನು ಮಾಡುತ್ತಿದ್ದಾರೆಂದರೆ, ಸುತ್ತುಮುತ್ತ ಇರುವಂಥ ಜಮೀನನ್ನು ಅಕ್ವಾಯರ್ ಮಾಡಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾರೆಯೇ ಹೊರತು ಇವೆಲ್ಲಾ ಊರುಗಳಲ್ಲಿ ಈಗಾಗಲೇ ಜಮೀನಿವೆ,